

# ಲಿಪಿಕಾರ ಕನ್ನಡಿಗ!

**ಸಮಕಾಲೀನ ವಿದ್ಯಮಾನಗಳಿಗೆ ಸ್ಪಂದಿಸುವ ಸಿನಿಮಾಗಳನ್ನೇ ಮಾಡುತ್ತಿದ್ದ ಬಿ.ಎಂ. ಗಿರಿರಾಜ್, ಪೀರಿಯಾಡಿಕಲ್ ಸಿನಿಮಾ ಮೂಲಕ ಜನರ ಎದುರು ಬರಲು ಸಜ್ಜಾಗಿದ್ದಾರೆ. ಇದು ಖಂಡಿತ ಕನ್ನಡದಲ್ಲಿ ಭಿನ್ನ ಮಾದರಿಯ ಸಿನಿಮಾ ಆಗಲಿದೆ ಎಂಬ ನಂಬಿಕೆ ಅವರದ್ದು.**

**■ ಪದ್ಮನಾಭ ಭಟ್**



ಗಿರಿರಾಜ್

'ಜಟ್ಟ', 'ಮೈತ್ರಿ', 'ಅಮರಾವತಿ'ಯಂಥ ಪ್ರಯೋಗಶೀಲ ಸಿನಿಮಾಗಳನ್ನು ಕೊಟ್ಟ ಸೂಕ್ಷ್ಮಸಂವೇದನೆಯ ನಿರ್ದೇಶಕ ಬಿ.ಎಂ. ಗಿರಿರಾಜ್. ತಮ್ಮ ಎಲ್ಲ ಸಿನಿಮಾಗಳಲ್ಲಿಯೂ ಸಮಕಾಲೀನ ವಿದ್ಯಮಾನಕ್ಕೆ ಸ್ಪಂದಿಸುವ ಪ್ರಯತ್ನ ಮಾಡುತ್ತಿದ್ದ ಅವರೀಗ ಇತಿಹಾಸದ ಕಡೆಗೆ ಮುಖ ಮಾಡಿದ್ದಾರೆ.

ತಮ್ಮ ನಿರ್ದೇಶನದ ಮುಂದಿನ ಸಿನಿಮಾ 'ಕನ್ನಡಿಗ'ದಲ್ಲಿ ಅವರು ಕಿಟೆಲ್ ಕಾಲಮಾನದ ಒಬ್ಬ ಲಿಪಿಕಾರನ ಬದುಕಿನ ಕಥೆಯನ್ನು ಕಟ್ಟಿಕೊಡಲು ಹೊರಟಿದ್ದಾರೆ.

'ಸಾಹಿತ್ಯ, ಪರಂಪರೆಯ ಬಗ್ಗೆ ನನಗೆ ಮೊದಲಿನಿಂದಲೂ ಆಸಕ್ತಿ ಇತ್ತು. ಆದರೆ ನಮ್ಮಲ್ಲಿ ಇತಿಹಾಸ ಅಂದಾಕ್ಷಣ ಅದು ರಾಜರ ಕಥೆ. ಅವರ ಶೌರ್ಯದ, ಯುದ್ಧದ ಕಥೆ. ಎಷ್ಟು ಜನರನ್ನು ಕೊಂದರು, ಎಷ್ಟು ಯುದ್ಧ ಮಾಡಿದರು ಎನ್ನುವುದರ ಕುರಿತೇ ಇತಿಹಾಸ ಹೇಳುತ್ತದೆ. ಆ ರಾಜ ನಮ್ಮ ರಾಜ್ಯದವನಾಗಿದ್ದರೆ ನಮಗೆ ಗ್ರೇಟ್, ಬೇರೆ ರಾಜ್ಯದವನಾಗಿದ್ದರೆ ವಿಲನ್. ಇತಿಹಾಸದ ಈ ನಡೆಯಲ್ಲಿ ನಾವು ಜನಸಾಮಾನ್ಯರನ್ನು ಮರೆತುಬಿಡುತ್ತೇವೆ. ಸಾವಿರಾರು ಜನರನ್ನು ಕೊಂದು ಕೋಟೆ ಕಟ್ಟಿದವರನ್ನು ಎತ್ತಿ ಮೆರೆಸುತ್ತೇವೆ. ಯಾವುದೋ ಪುಟ್ಟ ಹಳ್ಳಿಯಲ್ಲಿದ್ದುಕೊಂಡು ನಾಟಿ ಔಷಧಿ ಕಂಡುಹಿಡಿದು ನೂರಾರು ಜನರ ಪ್ರಾಣ ಉಳಿಸಿದವನನ್ನು ಮರೆತುಬಿಡುತ್ತೇವೆ. ಆದರೆ ಇಂಥ ಸಾಮಾನ್ಯರ ಕೆಲಸದಿಂದಲೇ ನಮ್ಮ ಪರಂಪರೆ ಬೆಳೆದಿದ್ದು, ಉಳಿದುಕೊಂಡು ಬಂದಿದ್ದು. ನಮ್ಮ ಸಿನಿಮಾ ಕೂಡ ಇಂಥ ಸಾಮಾನ್ಯ ಲಿಪಿಕಾರನೊಬ್ಬನ ಮೂಲಕ ಆ ಕಾಲಘಟ್ಟವನ್ನು ಕಟ್ಟಿಕೊಡುತ್ತದೆ' ಎಂದು ತಮ್ಮ ಸಿನಿಮಾದ ಹಿಂದಿನ ಪರಿಪ್ರೇಕ್ಷ್ಯವನ್ನು ಬಿಚ್ಚಿಡುತ್ತಾರೆ.

ಗಿರಿರಾಜ್ ಅವರು ಲಿಪಿಕಾರರ ಬಗ್ಗೆ ತಿಳಿದುಕೊಂಡಿದ್ದು ಎಂ.ಎಂ. ಕಲಬುರ್ಗಿ ಅವರ ಬರಹಗಳ ಮೂಲಕ. 'ಒಬ್ಬ ಕವಿ ಕಾವ್ಯವನ್ನು ಬರೆದುಬಿಟ್ಟಿರುತ್ತಾನೆ. ಆದರೆ ಆ ಕಾವ್ಯ ಪೀಳಿಗೆಯಿಂದ ಪೀಳಿಗೆಗೆ ಉಳಿದುಕೊಂಡು ಬರುವಲ್ಲಿ ಲಿಪಿಕಾರರ ಪಾತ್ರ ತುಂಬ ದೊಡ್ಡದು. ವಚನಚಳವಳಿಯ ನಂತರದ ಕಾಲಘಟ್ಟದಲ್ಲಿ ವಚನಗಳನ್ನು ಉಳಿಸಿಕೊಂಡು ಬಂದಿದ್ದೇ ಇಂಥ ಲಿಪಿಕಾರರು. ಅಂಥ ಲಿಪಿಕಾರರಿಗೆ ಕೃತಜ್ಞತೆ ಹೇಳುವುದೂ ಈ ಸಿನಿಮಾದ ಉದ್ದೇಶಗಳಲ್ಲೊಂದು' ಎಂದು ಗಿರಿರಾಜ್ ವಿವರಿಸುತ್ತಾರೆ.

ಲಿಪಿಕಾರಿಕೆ ಕೊನೆಗೊಂಡು ಮುದ್ರಣ ಸಂಸ್ಕೃತಿ ಆರಂಭಗೊಂಡ ಸಂಕ್ರಮಣಕಾಲದಲ್ಲಿಯೇ ಈ ಸಿನಿಮಾ ಕಥೆ ನಡೆಯುತ್ತದೆ. ಕಿಟೆಲ್ ಅವರೂ ಈ ಚಿತ್ರದ ಮುಖ್ಯ ಪಾತ್ರ. ಹಾಗೆಂದು ಇದು ಇತಿಹಾಸ ಹೇಳುವ ಸಿನಿಮಾ ಅಲ್ಲ ಎಂದೂ ಗಿರಿರಾಜ್ ಸ್ಪಷ್ಟಪಡಿಸುತ್ತಾರೆ. ಕಿಟೆಲ್ ಪಾತ್ರದಲ್ಲಿ ಜೇಮಿ ಆಲ್ಟರ್ ಕಾಣಿಸಿಕೊಂಡಿದ್ದಾರೆ.

'ನಮ್ಮ ಸಿನಿಮಾದಲ್ಲಿ ಐತಿಹಾಸಿಕ ಪಾತ್ರಗಳು ಬರುತ್ತವೆ. ಆದರೆ ಇದನ್ನು ನಾನು ಇತಿಹಾಸ ತಿಳಿಸುವ ಸಿನಿಮಾ ಎಂದು ಕರೆಯುವುದಿಲ್ಲ. ಯಾಕೆಂದರೆ ಆ ಸನ್ನಿವೇಶಗಳನ್ನು ಕಟ್ಟುವಲ್ಲಿ ನಾನು ಸಾಕಷ್ಟು ಸ್ವಾತಂತ್ರ್ಯ ತೆಗೆದುಕೊಂಡಿದ್ದೇನೆ. ಹಾಗಾಗಿ ಇದೊಂದು ಪೀರಿಯಾಡಿಕಲ್ ಸಿನಿಮಾ' ಎನ್ನುವುದು ಅವರ ಅಂಬೋಣ.

ಈಗಾಗಲೇ ಚಿತ್ರದ ಚಿತ್ರೀಕರಣ ಬಹುತೇಕ ಪೂರ್ಣಗೊಂಡಿದ್ದು, ಒಂದು ಹಾಡಿನ ಚಿತ್ರಣ ಮಾತ್ರ ಬಾಕಿ ಉಳಿದಿದೆ. ಆ ಹಾಡನ್ನು ಶಿವರಾಜ್‌ಕುಮಾರ್ ಹಾಡಿರುವುದು ವಿಶೇಷ. ಲಿಪಿಕಾರನಾಗಿ ಕಾಣಿಸಿಕೊಂಡಿರುವ ರವಿಚಂದ್ರನ್ ಪಾತ್ರಕ್ಕೆ ತಮ್ಮನ್ನು ತಾವು ಒಡ್ಡಿಕೊಂಡಿರುವ ರೀತಿಗೆ ಗಿರಿರಾಜ್ ಖುಷಿಕೊಂಡಿದ್ದಾರೆ. ಸೀತಾರಾಮ್ ಅವರ ಛಾಯಾಗ್ರಹಣ ಮತ್ತು ರವಿ ಬಸ್ರೂರ ಅವರ ಸಂಗೀತವೂ ಸಿನಿಮಾವನ್ನು ಮತ್ತೊಂದು ಮಜಲಿಗೆ ಎತ್ತುತ್ತವೆ ಎಂಬ ನಂಬಿಕೆ ಗಿರಿರಾಜ್ ಅವರದ್ದು.

'ನಾವು ಈ ಸಿನಿಮಾ ಮಾಡಿದ್ದಕ್ಕೆ ಖುಷಿಯಿದೆ. ನಾವಲ್ಲದೆ ಇಂಥ ಸಿನಿಮಾ ಇನ್ಯಾರೂಮಾಡಲು ಸಾಧ್ಯವಿಲ್ಲ. ಹುಂಬರಿಗೆ ಮಾತ್ರ ಇಂಥ ರಿಸ್ಕ್ ತೆಗೆದುಕೊಂಡು ಮಾಡಲು ಸಾಧ್ಯ' ಎನ್ನುವ ಗಿರಿರಾಜ್‌ಗೆ ಇದೊಂದು ಭಿನ್ನ ಸಿನಿಮಾವಾಗಿ ನಿಲ್ಲಲಿದೆ ಎಂಬ ವಿಶ್ವಾಸವಿದೆ.

ಪಾವನಾ ಮತ್ತು ಜೀವಿಕಾ ಈ ಚಿತ್ರದಲ್ಲಿ ನಾಯಕಿಯರಾಗಿ ಕಾಣಿಸಿಕೊಂಡಿದ್ದಾರೆ. ಲಾಕ್‌ಡೌನ್ ಮುಗಿದು, ಪರಿಸ್ಥಿತಿ ತಿಳಿಗೊಂಡ ಮೇಲೆ ಸಿನಿಮಾ ಪೂರ್ತಿಗೊಳಿಸಿ ಕನ್ನಡಿಗರ ಮುಂದೆ 'ಕನ್ನಡಿಗ'ನನ್ನು ತರುವ ಆಲೋಚನೆಯಲ್ಲಿ ಗಿರಿರಾಜ್ ಇದ್ದಾರೆ. ■